## ಕೇಂದ್ರ ಮಾಹಿತಿ ಆಯೋಗ (ಅಪೀಲು ಪ್ರಕ್ರಿಯೆ) ನಿಯಮಗಳು, 2005

### ವಿಷಯಾನುಕ್ರಮಣಿಕೆ

**ನಿಯಮ**


1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಅಪೀಲಿನ ಒಳಾಂಶಗಳು
4. ಅಪೀಲಿನೊಂದಿಗೆ ಲಗತ್ತಿಸಿರಬೇಕಾದ ದಸ್ತಾವೇಜುಗಳು
5. ಅಪೀಲನ್ನು ತೀರ್ಮಾನಿಸುವಲ್ಲಿನ ಪ್ರಕ್ರಿಯೆ
6. ಆಯೋಗದಿಂದ ನೋಟೀಸಿನ ಜಾರಿ
7. ಅಪೀಲುದಾರ ಅಥವಾ ಫಿರ್ಯಾದುದಾರನ ಖುದ್ದಾಗಿ ಹಾಜರಾಗುವುದು
8. ಆಯೋಗದ ಆದೇಶ

## ಕೇಂದ್ರ ಮಾಹಿತಿ ಆಯೋಗ (ಅಪೀಲು ಪ್ರಕ್ರಿಯೆ) ನಿಯಮಗಳು, 2005

**ಅಧಿಸೂಚನೆ**

**ಕಡತ ಸಂಖ್ಯೆ. 1/4/2005–ಐಆರ್, ದಿನಾಂಕ: 28 ಅಕ್ಟೋಬರ್ 2005**

**ಭಾರತ ರಾಜಪತ್ರ ವಿಶೇಷ ಸಂಚಿಕೆ, ದಿನಾಂಕ 28.10.2005**

**ಜಿಎಸ್‌ಆರ್. 650** (ಇ).– ಮಾಹಿತಿ ಹಕ್ಕು ಅಧಿನಿಯಮ, 2005 (2005ರ 22)ರ 27ನೇ ಪ್ರಕರಣದ (2)ನೇ ಉಪ ಪ್ರಕರಣದ (ಇ) ಮತ್ತು (ಎಫ್) ಖಂಡಗಳ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕೇಂದ್ರ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ಈ ಮೂಲಕ ರಚಿಸಿದೆ ಎಂದರೆ:–

1. **ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕೇಂದ್ರ ಮಾಹಿತಿ ಆಯೋಗ (ಅಪೀಲು ಪ್ರಕ್ರಿಯೆ) ನಿಯಮಗಳು, 2005 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಭಾರತ ರಾಜಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.–** ಈ ನಿಯಮಗಳಲ್ಲಿ ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಧಿನಿಯಮ" ಎಂದರೆ ಮಾಹಿತಿ ಹಕ್ಕು ಅಧಿನಿಯಮ, 2005;

(ಬಿ) "ಪ್ರಕರಣ" ಎಂದರೆ ಅಧಿನಿಯಮದ ಪ್ರಕರಣ;

(ಸಿ) "ಆಯೋಗ" ಎಂದರೆ ಕೇಂದ್ರ ಮಾಹಿತಿ ಆಯೋಗ;

(ಡಿ) ಇದರಲ್ಲಿ ಉಪಯೋಗಿಸಿದ ಮತ್ತು ಪರಿಭಾಷಿಸಿರದ ಆದರೆ ಅಧಿನಿಯಮದಲ್ಲಿ ಪರಿಭಾಷಿಸಿದ ಪದಗಳು ಹಾಗೂ ಪದಾವಳಿಗಳು ಆ ಅಧಿನಿಯಮದಲ್ಲಿ ಅನುಕ್ರಮವಾಗಿ ಅವುಗಳಿಗೆ ಗೊತ್ತುಪಡಿಸಿದ ಅರ್ಥಗಳನ್ನೇ ಹೊಂದಿರತಕ್ಕದ್ದು.

3. **ಅಪೀಲಿನ ಒಳಾಂಶಗಳು.–** ಆಯೋಗಕ್ಕೆ ಸಲ್ಲಿಸುವ ಅಪೀಲು ಈ ಕೆಳಕಂಡ ಮಾಹಿತಿಯನ್ನು ಒಳಗೊಂಡಿರತಕ್ಕದ್ದು, ಎಂದರೆ,–

(i) ಅಪೀಲುದಾರನ ಹೆಸರು ಮತ್ತು ವಿಳಾಸ;

(ii) ಯಾರ ತೀರ್ಮಾನದ ವಿರುದ್ಧ ಅಪೀಲು ಸಲ್ಲಿಸಲಾಗಿದೆಯೋ ಆ ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು ಮತ್ತು ವಿಳಾಸ;

(iii) ಯಾವ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗಿದೆಯೋ ಅದರ ಸಂಖ್ಯೆ ಏನಾದರೂ ಇದ್ದರೆ ಆ ಸಂಖ್ಯೆ ಸೇರಿದಂತೆ ಆದೇಶದ ವಿವರಗಳು;

(iv) ಅಪೀಲಿಗೆ ಕಾರಣವಾಗಿರುವ ಸಂಕ್ಷಿಪ್ತ ಸಂಗತಿಗಳು;

(v) ಭಾವಿತ ನಿರಾಕರಣೆಯ ವಿರುದ್ಧ ಅಪೀಲು ಸಲ್ಲಿಸಲಾಗಿದ್ದರೆ, ಅರ್ಜಿ ಸಂಖ್ಯೆ ಮತ್ತು ದಿನಾಂಕ ಸೇರಿದಂತೆ, ಅರ್ಜಿಯ ವಿವರಗಳು ಮತ್ತು ಯಾರಿಗೆ ಅರ್ಜಿ ಸಲ್ಲಿಸಲಾಗಿದೆಯೋ ಆ ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು ಮತ್ತು ವಿಳಾಸ;

(vi) ಕೋರಿಕೊಂಡ ಕೋರಿಕೆ ಅಥವಾ ಪರಿಹಾರ;

(vii) ಕೋರಿಕೆ ಅಥವಾ ಪರಿಹಾರಕ್ಕಾಗಿ ಕಾರಣಗಳು;

(viii) ಅಪೀಲುದಾರನಿಂದ ಸತ್ಯಾಪನೆ ; ಮತ್ತು

(ix) ಆಯೋಗವು ಅಪೀಲನ್ನು ತೀರ್ಮಾನಿಸುವುದಕ್ಕಾಗಿ ಅವಶ್ಯಕವೆಂದು ಭಾವಿಸಬಹುದಾದ ಯಾವುದೇ ಇತರ ಮಾಹಿತಿ.

4. **ಅಪೀಲಿನೊಂದಿಗೆ ಲಗತ್ತಾಗಿರಬೇಕಾದ ದಸ್ತಾವೇಜುಗಳು.–** ಆಯೋಗಕ್ಕೆ ಸಲ್ಲಿಸಿದ ಪ್ರತಿಯೊಂದು ಅಪೀಲಿಗೆ ಈ ಕೆಳಕಂಡ ದಸ್ತಾವೇಜುಗಳನ್ನು ಲಗತ್ತಿಸಿರತಕ್ಕದ್ದು, ಎಂದರೆ,–

(i) ಯಾವ ಆದೇಶ ಅಥವಾ ದಸ್ತಾವೇಜುಗಳ ವಿರುದ್ಧ ಅಪೀಲು ಸಲ್ಲಿಸಲಾಗುತ್ತದೆಯೋ ಆ ಆದೇಶಗಳ ಅಥವಾ ದಸ್ತಾವೇಜುಗಳ ಸ್ವಯಂ ದೃಢೀಕರಿಸಿದ ಪ್ರತಿಗಳು;

(ii) ಅಪೀಲುದಾರನು ಆಧರಿಸಿರುವ ಮತ್ತು ಅಪೀಲಿನಲ್ಲಿ ಉಲ್ಲೇಖಿಸಿದ ದಸ್ತಾವೇಜುಗಳ ಪ್ರತಿಗಳು;

(iii) ಅಪೀನಲ್ಲಿ ಉಲ್ಲೇಖಿಸಿದ ದಸ್ತಾವೇಜುಗಳ ಸೂಚಿ.

5. **ಅಪೀಲನ್ನು ತೀರ್ಮಾನಿಸುವಲ್ಲಿನ ಪ್ರಕ್ರಿಯೆ.–** ಅಪೀಲನ್ನು ತೀರ್ಮಾನಿಸುವಲ್ಲಿ ಆಯೋಗವು,–

(i) ಸಂಬಂಧಪಟ್ಟ ಅಥವಾ ಹಿತಾಸಕ್ತಿಯುಳ್ಳ ವ್ಯಕ್ತಿಯಿಂದ ಪ್ರಮಾಣದ ಮೇಲೆ ಅಥವಾ ಶಪಥಪತ್ರದ ಮೇಲೆ ಮೌಖಿಕ ಅಥವಾ ಲಿಖಿತ ಸಾಕ್ಷ್ಯವನ್ನು ಸುನಾವಣೆ ಮಾಡಬಹುದು;

(ii) ದಸ್ತಾವೇಜುಗಳು, ಸಾರ್ವಜನಿಕ ದಾಖಲೆಗಳು ಅಥವಾ ಅದರ ಪ್ರತಿಗಳನ್ನು ಅವಲೋಕಿಸಬಹುದು ಅಥವಾ ಪರಿಶೀಲಿಸಬಹುದು;

(iii) ಅಧಿಕೃತ ಅಧಿಕಾರಿಯ ಮೂಲಕ ಹೆಚ್ಚಿನ ವಿವರಗಳು ಅಥವಾ ಸಂಗತಿಗಳ ಬಗ್ಗೆ ವಿಚಾರಣೆ ಮಾಡಬಹುದು;

(iv) ಸಂದರ್ಭಾನುಸಾರ, ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿ, ಕೇಂದ್ರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಅಥವಾ ಮೊದಲ ಅಪೀಲನ್ನು ತೀರ್ಮಾನಿಸುವ ಅಂಥ ಹಿರಿಯ ಅಧಿಕಾರಿ ಅಥವಾ ಯಾರ ವಿರುದ್ಧ ದೂರನ್ನು ಸಲ್ಲಿಸಲಾಗಿದೆಯೋ ಅಂಥ ವ್ಯಕ್ತಿಯನ್ನು ಸುನಾವಣೆ ಮಾಡಬಹುದು;

(v) ಮೂರನೇ ಪಕ್ಷಕಾರರನ್ನು ಸುನಾವಣೆ ಮಾಡಬಹುದು;

(vi) ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿ, ಕೇಂದ್ರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ, ಮೊದಲ ಅಪೀಲನ್ನು ತೀರ್ಮಾನಿಸಿದಂಥ ಹಿರಿಯ ಅಧಿಕಾರಿ, ಯಾರ ವಿರುದ್ಧ ಅಪೀಲು ಸಲ್ಲಿಸಲಾಗಿದೆಯೋ ಆ ವ್ಯಕ್ತಿ ಅಥವಾ ಮೂರನೇ ಪಕ್ಷಕಾರನಿಂದ ಶಪಥ ಪತ್ರಗಳ ಮೇಲೆ ಸಾಕ್ಷ್ಯವನ್ನು ಪಡೆಯಬಹುದು.

6. **ಆಯೋಗದಿಂದ ನೋಟೀಸಿನ ಜಾರಿ.–** ಆಯೋಗವು ನೀಡಬೇಕಾದ ನೋಟೀಸನ್ನು ಈ ಕೆಳಕಂಡ ಯಾವುವೇ ವಿಧಾನಗಳಲ್ಲಿ ಜಾರಿ ಮಾಡಬಹುದು, ಎಂದರೆ,–

(i) ಪಕ್ಷಕಾರರ ಮೂಲಕ ಜಾರಿ ಮಾಡಬಹುದು;

(ii) ಪ್ರೊಸೆಸ್ ಸರ್ವರ್ ಮೂಲಕ ಖುದ್ದಾಗಿ ವಶಾವಣೆ ಮಾಡುವ ಮೂಲಕ;

(iii) ತಲುಪೊಪ್ಪಿಗೆ ಸಹಿತ ನೋಂದಾಯಿತ ಅಂಚೆ ಮೂಲಕ;

(iv) ಕಚೇರಿ ಅಥವಾ ಇಲಾಖೆ ಮುಖ್ಯಸ್ಥರ ಮೂಲಕ.

7. **ಅಪೀಲುದಾರ ಅಥವಾ ಫಿರ್ಯಾದುದಾರರು ಖುದ್ದಾಗಿ ಹಾಜರಾಗುವುದು.–** (1) ಸಂದರ್ಭಾನುಸಾರ ಅಪೀಲುದಾರ ಅಥವಾ ಫಿರ್ಯಾದುದಾರನನ್ನು ಪ್ರತಿಯೊಂದು ಸಂದರ್ಭದಲ್ಲಿ ಸುನಾವಣೆ ದಿನಾಂಕಕ್ಕೆ ಕನಿಷ್ಠ ಪಕ್ಷ ಏಳು ಸ್ಪಷ್ಟ ದಿನಗಳ ಮೊದಲು ಸುನಾವಣೆ ದಿನಾಂಕವನ್ನು ತಿಳಿಸತಕ್ಕದ್ದು.

(2) ಸಂದರ್ಭಾನುಸಾರ ಅಪೀಲುದಾರ ಅಥವಾ ಫಿರ್ಯಾದುದಾರನು ತನ್ನ ವಿವೇಚನಾನುಸಾರ, ಆಯೋಗವು ಅಪೀಲಿನ ಅಥವಾ ಫಿರ್ಯಾದಿಯ ಸುನಾವಣೆ ಮಾಡುವ ಸಮಯದಲ್ಲಿ ಖುದ್ದಾಗಿ ಅಥವಾ ತನ್ನ ಕ್ರಮಬದ್ಧವಾಗಿ ಅಧಿಕೃತಗೊಳಿಸಲಾದ ಪ್ರತಿನಿಧಿಯ ಮೂಲಕ ಹಾಜರಾಗಬಹುದು ಅಥವಾ ಹಾಜರಾಗದಿರುವ ಬಗ್ಗೆಯೂ ಆಯ್ಕೆ ಮಾಡಿಕೊಳ್ಳಬಹುದು.

(3) ಸಂದರ್ಭಾನುಸಾರ ಆಯೋಗವು ಅಪೀಲುದಾರ ಅಥವಾ ಫಿರ್ಯಾದುದಾರನು ಕೈಮೀರಿದ ಸನ್ನಿವೇಶಗಳಿಂದ ಸುನಾವಣೆಗೆ ಹಾಜರಾಗುವುದಕ್ಕೆ ಸಾಧ್ಯವಾಗಲಿಲ್ಲವೆಂದು ಮನಗಂಡರೆ, ಆಗ, ಆಯೋಗವು ಅಂತಿಮ ನಿರ್ಣಯ ಕೈಗೊಳ್ಳುವ ಅಥವಾ ಅದು ಸೂಕ್ತವೆಂದು ಭಾವಿಸಬಹುದಾದಂತೆ ಯಾವುದೇ ಇತರ ಯುಕ್ತ ಕ್ರಮ ಕೈಗೊಳ್ಳುವ ಮೊದಲು ಸಂದರ್ಭಾನುಸಾರ ಅಪೀಲುದಾರನನ್ನು ಅಥವಾ ಫಿರ್ಯಾದುದಾರನನ್ನು ಅಹವಾಲನ್ನು ಹೇಳಿಕೊಳ್ಳಲು ಇನ್ನೊಂದು ಅವಕಾಶವನ್ನು ನೀಡಬಹುದು.

(4) ಸಂದರ್ಭಾನುಸಾರ ಅಪೀಲುದಾರ ಅಥವಾ ಫಿರ್ಯಾದುದಾರನು, ತನ್ನ ವಿಷಯಗಳನ್ನು ಮಂಡಿಸುವಾಗ ಮತ್ತು ಆತನನ್ನು ಪ್ರತಿನಿಧಿಸುವ ವ್ಯಕ್ತಿಯು ನ್ಯಾಯವಾದಿಯಾಗಿಲ್ಲದಿರುವಾಗ ಅಪೀಲಿನ ಪ್ರಕ್ರಿಯೆಯಲ್ಲಿ ಯಾರೇ ವ್ಯಕ್ತಿಯ ನೆರವನ್ನು ಕೋರಬಹುದು.

**8. ಆಯೋಗದ ಆದೇಶ.–** ಆಯೋಗದ ಆದೇಶವನ್ನು ಮುಕ್ತ ವ್ಯವಹರಣೆಗಳಲ್ಲಿ ಉಚ್ಚರಿಸತಕ್ಕದ್ದು ಮತ್ತು ಅದನ್ನು ರಿಜಿಸ್ಟ್ರಾರ್‌ರ ಮೂಲಕ ಅಥವಾ ಈ ಉದ್ದೇಶಕ್ಕಾಗಿ ಆಯೋಗದ ಮೂಲಕ ಅಧಿಕೃತಗೊಳಿಸಿದ ಯಾರೇ ಇತರ ಅಧಿಕಾರಿಯ ಮೂಲಕ ಕ್ರಮಬದ್ಧವಾಗಿ ಲಿಖಿತದಲ್ಲಿ ಪ್ರಮಾಣೀಕರಿಸಿರತಕ್ಕದ್ದು.